ಅದಕ್ಕಾಗಿ ಈಗಾಗಲೇ ನಾಲ್ಕು ಕೋಟಿ ರೂಪಾಯಿಗಳ ಹಣವನ್ನು ಇಟ್ಟಿದ್ದೇವೆ. ಸಂಪೂರ್ಣವಾಗಿ ರಿಪೇರಿಗೂ 98 ಕೋಟಿ ರೂಪಾಯಿಗಳನ್ನು ಇಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದಕ್ಕೆ ಈಗ ಅದು ಇಂಟರ್‌ಸ್ಟೇಟ್ ಬೋರ್ಡ್‌ಗೆ ತಪ್ಪಿಸುವುದಕ್ಕೆ ತಕ್ಷಣ ಅರ್ಡರ್ ಆಗಬೇಕು. ಅದನ್ನು ಯಾವ ರೀತಿಯಾಗಿ ಮಾಡಬೇಕು ಎಂಬುದರ ಬಗ್ಗೆ ಯೋಚನೆ ಮಾಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2381

ಸದಸ್ಯರ ಹೆಸರು : ಶ್ರೀ ರಾಜೇಂದ್ರ ವರ್ಮ (ಹುಲಸೂರು)

ಉತ್ತರಿಸುವ ಸಚಿವರು : ಶ್ರೀ ಮಲ್ಲಿಕಾರ್ಜುನ ಖರ್ಗೆ
(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1.	ಕಾರಂಜಾ ಯೋಜನೆಯು ಡಾಕುಳಗಿ ಮತ್ತು ಹಿಲಾಲಪುರ ಮಧ್ಯದಲ್ಲಿ ಏತ ನೀರಾವರಿ ಯೋಜನೆಯನ್ನು ಎಂದು ಪ್ರಾರಂಭ ಮಾಡಲಾಗುವುದು.	ಕಾರಂಜಾ ಯೋಜನೆಯ ಹಿನ್ನೀರಿನ ಎಡ ದಂಡೆಯಲ್ಲಿ ಡಾಕುಳಗಿ ಮತ್ತು ಹಿಲಾಲಪುರ ಮಧ್ಯದಲ್ಲಿ ಅತವಾಳ ಬಳಿ ಏತ ನೀರಾವರಿ ಯೋಜನೆ ಅಂದಾಜಿಗೆ ಸರ್ಕಾರದ ಮಟ್ಟ ದಲ್ಲಿ ವಿವಿಧ ಇಲಾಖೆಗಳಲ್ಲಿ ಮಂಜೂರಾತಿ ನೀಡುವ ಪೂರ್ವವಾಗಿ ಪರಿಶೀಲನೆಯಲ್ಲಿದೆ.
2.	ಈ ಕಾಮಗಾರಿಗೆ ಅಂದಾಜು ಎಷ್ಟು ಹಣ ಖರ್ಚಾಗುತ್ತದೆ:	ಈ ಯೋಜನೆಗೆ ರೂ.18.09 ಕೋಟಿಗಳ ಅಂದಾಜು ತಯಾರಿಸಿದ್ದು ಇದು ಪರಿ ಶೀಲನೆಯ ಹಂತದಲ್ಲಿದೆ.
3.	ಈ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ.	ಕಾರಂಜಾ ಯೋಜನೆಗೆ ಎ.ಐ.ಬಿ.ಪಿ. ರಡಿ ಯಲ್ಲಿ ಕೇಂದ್ರ ಸಾಲ ಬಿಡುಗಡೆಯಾಗಿರುವ ಮೊತ್ತದಲ್ಲಿ ಕಾರಂಜಾ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಜೂನ್ 2005ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದ್ದು ಈ ಯೋಜನೆಗೆ ಬಿಡುಗಡೆಯಾಗಿರುವ ಎ.ಐ.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ಬಿ.ಪಿ. ಸಾಲದಡಿಯಲ್ಲಿ ಉಳಿಯ ಬಹುದಾದ ಮೊತ್ತದಲ್ಲಿ ಸದರಿ ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಯೋಜಿಸಲಾಗಿದೆ.
4.	ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ಬೇಕಾಗಿರುವ ಕಾಲಾವಧಿ ಎಷ್ಟು?	ಸದರಿ ಯೋಜನೆಯನ್ನು 2005–06ನೇ ಸಾಲಿನಲ್ಲಿ ಪ್ರಾರಂಭಿಸಿ ಶೀಘ್ರದಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಶ್ರೀ ರಾಜೇಂದ್ರ ವರ್ಮ: ಮಾನ್ಯ ಅಧ್ಯಕ್ಷರೆ ಕಾರಂಜಾ ಯೋಜನೆ ಯಾವಾಗ ಪ್ರಾರಂಭವಾಗಿತ್ತು, ಆ ಸಮಯದಲ್ಲಿ ಎಡಭಾಗಕ್ಕೆ ಏತ ನೀರಾವರಿ ಮಾಡಬೇಕಾಗಿತ್ತು. ಆದರೆ ಅದನ್ನು ಸರ್ಕಾರ ಮಾಡಲಿಲ್ಲ. ಏಕೆಂದರೆ ಎಡಭಾಗಕ್ಕೆ ಇರುವಂತಹ ರೈತರ ಭೂಮಿ ಜಾಸ್ತಿ ಈ ಕಾರಂಜಾ ಯೋಜನೆಯಲ್ಲಿ ಹೋಗಿದೆ. ಆ ಸಮಯದಲ್ಲಿ ರೈತರಿಗೆ ಪರಿಹಾರ ಕೂಡ ಸರಿಯಾಗಿ ಸಿಕ್ಕಿಲ್ಲ. ಹಾಗೂ ಮೂಲಭೂತ ಸೌಲಭ್ಯಗಳು ಕೂಡ ಸರಿಯಾಗಿ ಸಿಕ್ಕಿಲ್ಲ. ಅಲ್ಲಿದ್ದಂತಹ ರೈತರು ಮಕ್ಕಳಿಗೆ ನೌಕರಿಯನ್ನು ಸಹ ಕೊಟ್ಟಿಲ್ಲ. ಈಗ ಉಳಿದಿರುವಂತಹ ಅಲ್ಪಸ್ವಲ್ಪ ಭೂಮಿ ಏನಿದೆ ಆ ಭೂಮಿಗೆ ನೀರನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕಾದರೆ ಅಲ್ಲಿ ಎಡಭಾಗದ ಏತನೀರಾವರಿ ಆಗಿದ್ದರೆ ಅಲ್ಲಿನ ರೈತರ ಜೀವನ ಮಾಡವುದಕ್ಕೆ ಅವಕಾಶವಾಗುತ್ತದೆ ಹಾಗೂ ಈ ಏತನೀರಾವರಿ ಆದರೆ ಅಲ್ಲಿನ ರೈತರು ನೆಮ್ಮದಿಯಿಂದ ಬಾಳುತ್ತಾರೆ ಎನ್ನುವ ಉದ್ದೇಶ ಇದೆ. ಮತ್ತು ಕಡತ ಈಗಾಗಲೇ ಸರ್ಕಾರದ ಮುಂದಿದೆ. ಇದಕ್ಕೆ ಎ.ಐ.ಬಿ.ಪಿಯಲ್ಲಿ ಕೂಡ ಹಣ ಅವಕಾಶ ಇದೆ. ಇದಕ್ಕೆ ತಾಂತ್ರಿಕವಾದಂತಹ ಒಪ್ಪಿಗೆ ಹಾಗೂ ಆಡಳಿತಾತ್ಮಕವಾದಂತಹ ಒಪ್ಪಿಗೆ ಕೂಡ ನೀಡಿದ್ದಾರೆ. ಇದರ ಬಗ್ಗೆ ನನ್ನ ಒತ್ತಾಯ ಏನೆಂದರೆ ಮಾನ್ಯ ಸಚಿವರು ಇದಕ್ಕೆ 2005–06ನೇ ಸಾಲಿನಲ್ಲಿ ಯೋಜನೆಯನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಬಿಟ್ಟು ಈ ಯೋಜನೆಯನ್ನು 2004–05ರಲ್ಲಿ ತೆಗೆದುಕೊಂಡು ಮಾಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ಮಾನ್ಯ ವರ್ಮ ಅವರಿಗೆ ಎಷ್ಟು

ಆಸಕ್ತಿ ಇದೆ ಅಷ್ಟೆ ಆಸಕ್ತಿ ಸರ್ಕಾರಕ್ಕೆ ಇದೆ. ಈ ಯೋಜನೆಯ 2004–05ನೇ ಸಾಲಿಗೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಕೇವಲ ಎರಡು ದಿನಗಳು ಮಾತ್ರ ಇದೆ. ಇದನ್ನು 2005–6ನೇ ಸಾಲಿನ ಬಜೆಟ್‌ನಲ್ಲಿ ಮಾಡಬೇಕು. ತಾವು ಹೇಳಿದ ಹಾಗೆ ಎ.ಐ.ಬಿ.ಪಿಯಲ್ಲಿ ಈ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ 100 ಕೋಟಿ ರೂಪಾಯಿ ಆ್ಯಕ್ಸಿಲರೇಟಡ್ ಇರಿಗೇಷನ್ ಬೆನಿಫಿಟ್ ಪ್ರೋಗ್ರಾಂನಲ್ಲಿ ಮಂಜೂರಾಗಿದೆ. ಈಗ ತಾವು ಹೇಳುತ್ತಿರುವಂತಹ ಲಿಫ್ಟ್ ಇರಿಗೇಷನ್ ಕೂಡ ಈಗಾಗಲೇ ನಾವು ಮಂಜೂರು ಮಾಡಿ, ಅದು ನಮ್ಮಿಂದ ಆರ್ಥಿಕ ಇಲಾಖೆಗೆ ಕಡತ ಹೋಗಿದೆ. ಅದು ಮಂಜೂರಾಗಿ ಬರುತ್ತದೆ. ಆ ಲಿಫ್ಟ್ ಇರಿಗೇಷನ್ ಆದರೆ ಮಾನ್ಯ ವರ್ಮರವರು ಹೇಳಿದ ಹಾಗೆ ಏನು ಎಡದಂಡೆಯಿಂದ ಬ್ಯಾಕ್‌ವಾಟರ್ ಕೆಲವು ಜನರಿಗೆ ಕೊಡಬೇಕು. ಅವರು ಹೇಳಿದಂತೆ ಆ ನೀರು ಏನು ಕೆಲವು ಹಳ್ಳಿಗಳಿಗೆ ತಲುಪುತ್ತದೆ ಆ ಕೆಲಸವನ್ನು ನಾವು 2005 ಡಿಸೆಂಬರ್ ಒಳಗಾಗಿ ಸಂಪೂರ್ಣವಾಗಿ ಮಾಡುತ್ತೇವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೆ ಬೀದರ್ ಜಿಲ್ಲೆಯಿಂದ, ಈ ಕಾರಂಜಾ ಯೋಜನೆಯಲ್ಲಿ ಮುಳುಗಡೆಯಾದಂತಹ ರೈತರು ಒಂದು ನಿಯೋಗ ಮಾನ್ಯ ಸಚಿವರ ಹತ್ತಿರ ಬಂದಿತ್ತು. ಆದರೆ ಅಲ್ಲಿ ಈವರೆಗೂ ಯಾವುದೇ ಮೂಲಭೂತ ಸೌಲಭ್ಯಗಳು ಮತ್ತು ಪುನರ್ವಸತಿ ನಿರ್ಮಾಣ ಕಾರ್ಯದ ಬಗ್ಗೆ ಏನೂ ಕಾರ್ಯರೂಪಕ್ಕೆ ಬಂದಿಲ್ಲ. ಆ ಕೆಲಸವನ್ನು ಯಾವಾಗ ಮಾಡುತ್ತಾರೆಂದು ಮಾನ್ಯ ಸಚಿವನ್ನು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಬಗ್ಗೆ ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗಾಗಲೇ ಯಾರ್ಯಾರಿಗೆ ಎಷ್ಟೆಷ್ಟು ಹಣವನ್ನು ಪಾವತಿ ಮಾಡಬೇಕಾಗಿತ್ತು. ಆ ಹಣವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಡೆಲಿಗೇಷನ್ ತೆಗೆದುಕೊಂಡು ನಮ್ಮಲ್ಲಿಗೆ ಬಂದಿದ್ದರು ಹಾಗೂ ನಮ್ಮ ಬೀದರ್ ಜಿಲ್ಲೆಯ ಅನೇಕ ಮುಖಂಡರು ಮತ್ತು ಶಾಸಕ ಮಿತ್ರರು ಕೂಡ ಬಂದಿದ್ದರು. ಈಗಾಗಲೇ ಅಲ್ಲಿ ಏನಾಗಿದೆ ಎಂದರೆ ಅವರು ಕಾಂಪನ್ಸೇಷನ್ ತೆಗೆದುಕೊಂಡು ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ಕೋರ್ಟ್‌ನಲ್ಲಿ ಕೂಡ ಫೈನಲೈಜ್ ಆಗಿದೆ. ಆದರೆ ಈಗ ಬಾಲಗಕೋಟೆ ಮಾದರಿಯಲ್ಲಿ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಆ ರೀತಿ ಮಾಡಿಕೊಡುವುದಕ್ಕೆ ಬರುವುದಿಲ್ಲ. ಬಾಗಲಕೋಟೆಯದೆ ಬೇರೆ ವಿಚಾರ. ಬಾಗಲಕೋಟೆಯಲ್ಲಿ ಇನ್ನೂ ಯಾರು ಕೂಡ ಕಾಂಪನ್ಸೇಷನ್ ತೆಗೆದುಕೊಂಡಿಲ್ಲ. ಇಲ್ಲಿ ಏನಾಗಿದೆ ಎಂದರೆ ಇಲ್ಲಿ ಕಾಂಪನ್ಸೇಷನ್ ತೆಗೆದುಕೊಂಡೂ, ಅದಕ್ಕೆ ಅಪೀಲ್ ಕೂಡ ಹಾಕಿಕೊಂಡು ಅದು ಎನಾನ್ಸ್‌ಮೆಂಟ್ ಕೂಡ ತೆಗೆದುಕೊಂಡು ಖರ್ಚು

ಮಾಡಿಕೊಂಡಿದ್ದಾರೆ. ಆದುದರಿಂದ ಅಲ್ಲಿ ಕಾಂಪನ್ಸೇಷನ್ ಪುನಃ ಕೊಡತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೆ ಬೇಸಿಕ್ ಅಮಿನಿಟೀಸ್ ಏನಾದರೂ ಆಗುವುದಿದ್ದರೆ, ಅದು ರಸ್ತೆ ಕುಡಿಯುವ ನೀರು ಅಥವಾ ಶಾಲೆ ಇಂತಾದ್ದು ಏನಾದರೂ ಕೊರತೆ ಇದ್ದರೆ ಖಂಡಿತವಾಗಿ ಸರ್ಕಾರ ಅದನ್ನು ಪರಿಶೀಲನೆ ಮಾಡಿಸಿಕೊಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಮುಳಗಡೆ ಪ್ರದೇಶದ ಸಂತ್ರಸ್ತರಿಗೆ ಬೇಸಿಕ್ ಅಮಿನಿಟೀಸ್ ಹಾಗೂ ಯಾವ ರೀತಿ ಬಾಗಲಕೋಟೆ ಹಾಗೂ ಆಲಮಟ್ಟಿ ಕಡೆಗಳಲ್ಲಿ ರೈತರಿಗೆ ಕಾಂಪನ್ಸೇಷನ್ ಸಿಕ್ಕಿದೆ. ಅದೇ ರೀತಿ ಕೊಡುವ ವಿಚಾರದಲ್ಲಿ ಪುನಃ ಪರಿಶೀಲನೆ ಮಾಡಿ ಮಾಡಬೇಕು. ಏಕೆಂದರೆ ಈಗಾಗಲೇ ಅಲ್ಲಿನ ರೈತರು ಒಪ್ಪಿಕೊಂಡಿದ್ದಾರೆ ಎನ್ನುವ ಆಧಾರದ ಮೇಲೆ ಮಾಡಿದರೆ ಅದು ತಪ್ಪಾಗುತ್ತದೆ. ಆದುದರಿಂದ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಸಹಾನುಭೂತಿ ನಮಗೂ ಇರುಬಹುದು ತಮಗೂ ಇರಬಹುದು. ಆದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ. ಈಗಾಗಲೇ ಹತ್ತಾರು ವರ್ಷಗಳ ಹಿಂದೆ ಅಲ್ಲಿ ಕಾಂಪನ್ಸೇಷನ್ ಕೊಟ್ಟಿದ್ದು, ಅದನ್ನು ಅವರು ತೆಗೆದುಕೊಂಡಿದ್ದಾಗಿದೆ. ಹಾಗೂ ಕೋರ್ಟ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಕೇಸಗಳು ಕೂಡ ಈಗಾಗಲೇ ಮುಕ್ತಾಯವಾಗಿದೆ. ಆದರೆ ಯಾವುದು ಅಪೀಲ್ ಇದೆ ಅದರ ಬಗ್ಗೆ ಕೋರ್ಟ್‌ನಿಂದ ಡೈರೆಕ್ಷನ್ ಬಂದರೆ ಅದರ ಬಗ್ಗೆ ಏನಾದರೂ ಯೋಚನೆ ಮಾಡಬಹುದು. ಆದರೆ ಈಗಿರತಕ್ಕಂಥ ಪರಿಸ್ಥಿತಿಯನ್ನು ನಾನು ಸ್ಪಷ್ಟಪಡಿಸಿದೆ. ಆಲಮಟ್ಟಿ ರೀತಿಯಲ್ಲಿ ಬೇರೆ ಯಾವುದೆ ಆಗಲಿ ಮತ್ತೆ ವಿಚಾರ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಆಲಮಟ್ಟಿಯಲ್ಲಿ ಇನ್ನು ಕಾಂಪನ್ಸೇಷನ್ ಕೊಟ್ಟಿಲ್ಲ. ಈಗ ಅಲ್ಲಿ ನಮಗೆ ಹೆಚ್ಚಿನ ಹಣ ಕೊಡಿ ಎಂದು ಅಲ್ಲಿನವರು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆ ಇದೆ.

ಕಾರಂಜಾ ಪ್ರಾಜೆಕ್ಟ್ ಮುಳುಗಡೆಯಾಗುತ್ತದೆಂದು ಅವರೆ ತಾವು ಕೇಳುತ್ತಿರುವಂತಹ ವಿಚಾರದಲ್ಲಿ ಈಗಾಗಲೇ ಕೊಟ್ಟಿದೆ. ಈ ಬಾರಿ ಮುಗಿಸಬೇಕು ಎನ್ನುವ ದೃಷ್ಟಿಯಿಂದ ಎ.ಐ.ಬಿ.ಪಿನಲ್ಲಿ ತೆಗೆದುಕೊಂಡು 100 ಕೋಟಿ ರೂಪಾಯಿಯ ಪ್ರಾವಿಜನ್ ಮಾಡಿದೆ. ಇದಕ್ಕೆ ಇನ್ನು ಹಣ ಕಡಿಮೆಯಾದರೆ, ಇನ್ನು ಹೆಚ್ಚಿನ ಹಣ ಕೊಟ್ಟು ಡಿಸೆಂಬರ್ ಒಳಗೆ ಅವರು ಹೇಳಿದಂತೆ ಏತನೀರಾವರಿ ಯೋಜನೆಯನ್ನು ಪೂರ್ತಿ ಮಾಡಿ ಬಲದಂಡೆ ಮತ್ತು ಎಡದಂಡೆ ಎರಡೂ ಕೂಡ ಮಾಡಿ ಆ ಮುಖಾಂತರ ನೀರು ಕೊಡುವ ವ್ಯವಸ್ಥೆ ಮಾಡುತ್ತೇವೆ.